



ಕಿವಿಯಲ್ಲಿ ಏನೋ ಪಿಸುಮಾತನ್ನು ಉಸುರಿದ;
ಅವಳು ನಸುನಾಚಿ ನಕ್ಕು,
ಅವನ ಕೆನ್ನೆಗೆ ಒಂದು ಹೂಪೆಟ್ಟು ಕೊಟ್ಟಳು
ಹುಸಿಕೋಪವನ್ನು ನಟಿಸಿ.

ಮೊಬೈಲಿನಲ್ಲಿ ಅವನಿಗೆ ಏನನ್ನೋ ತೋರಿದಳು
ಆತಂಕವಿತ್ತು ಮುಖದಲ್ಲಿ.
ಅವನು ಆಕೆಯ ಕೈಯ ಮೃದುವಾಗಿ ಅದುಮಿದ,
ನಾನಿಲ್ಲವೇ ಎನ್ನುವಂತೆ.

ಹೀಗೇ ಸಾಗಿತ್ತು ಅವರ ಸರಸ ಸಲ್ಲಾಪ,
ಈ ಜಗದ ಪರಿವೆ ಇರದೆ;
ಪ್ರೀತಿ ಎನ್ನುವ ಮಾಯೆ ಇಳಿಬಿಟ್ಟಹಾಗಿತ್ತು
ಅವರ ಕಂಗಳ ಮುಂದೆ ಪರದೆ.

ಖುಷಿಯಲ್ಲಿದ್ದರು, ಕಂಡು ನನಗೂ ಖುಷಿಯಾಯಿತು,
ಎದ್ದು ಮನೆಗೆ ಬಂದೆ;
ಬರುವಾಗ ಅಂಗಡಿಯಿಂದ ಗುಟ್ಟಾಗಿ ತಂದಿದ್ದ
ಜಿಲೇಬಿ, ಕದ್ದುತಿಂದೆ.

● **ಬಿ.ಆರ್. ಲಕ್ಷ್ಮಣರಾವ್**